ಅಧ್ಯಕ್ಷರು:- ಶನಿವಾರ ಸೇರೋಣ.

ಪ್ರಕಟಣೆ

ಅಧ್ಯಕ್ಷರು:- ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 115ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ 1993 ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ 13-1-1993ರಂದು ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಈ ಸಭೆ ಏಳುವುದರೊಳಗೆ ನನಗೆ ಅವಕಾಶ ಕೊಡುತ್ತೀರಿ ಎಂದು ಆಶ್ವಾಸನೆ ಕೊಟ್ಟಿದ್ದೀರಿ. ನಾನು ಬೆಳಿಗ್ಗೆಯಿಂದ ಕಾದಿದ್ದೇನೆ. ಇವತ್ತು ಸಿದ್ಧನಾಗಿದ್ದೇನೆ, ದಯಮಾಡಿ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು:- ಈ ಕಾರ್ಯಸೂಚಿ ಪ್ರಕಾರ ಇನ್ನೂ 2-3 ವಿಷಯಗಳು ಚರ್ಚೆಯಾಗಬೇಕಾಗಿದೆ. ಒಂದು ಮುಖ್ಯವಾದ ಗಮನ ಸೆಳೆಯುವ ಸೂಚನೆ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟಿದ್ದುದು. ಅದು ನೀವು ಬರಲಿ ಅಂತ ಮುಂದಕ್ಕೆ ಹಾಕಿದ್ದೆವು, ಅದು ಚರ್ಚೆಯಾಗಬೇಕಾಗಿದೆ. ಜೊತೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಸೂಚನೆ ಆದರ ಬಗ್ಗೆ ಟ್ರಾನ್ಸ್‌ಫಾರ್ಮರ್ ವಿಚಾರದಲ್ಲಿ ಚರ್ಚೆಯಾಗಬೇಕಾಗಿದೆ. ಇವತ್ತು ಬೆಳಿಗ್ಗೆ 9-30 ಗಂಟೆಯಿಂದ ಕುಳಿತಿದ್ದೆವು ಜೊತೆಗೆ ನಮ್ಮ ಪತ್ರಿಕಾ ಮಿತ್ರರಿಗೂ ಕೂಡ ಬಹಳ ತೊಂದರೆಯಾಗಿದೆ. ಅವರೆಲ್ಲ ಬೆಳಿಗ್ಗೆ 9 ಗಂಟೆಗೆ ಬಂದವರು ಈಗಾಗಲೇ ಆರೂವರೆ ಗಂಟೆಯಾಗಿದೆ. ಅವರು ಈ ದಿವಸದ ಕಾರ್ಯಕಲಾಪಗಳ ವರದಿಯನ್ನು ಅವರವರ ಪತ್ರಿಕಾಲಯಗಳಿಗೆ ಕಳಿಸಿಕೊಡಬೇಕು. ಸರ್ಕಾರದವರು ಮುಕ್ತ ಮನಸ್ಸಿನಿಂದ ಯಾವುದೇ ಚರ್ಚೆಗೆ ನಾವು ನಿರ್ಬಂಧ ಹಾಕುವುದಿಲ್ಲ ಎಂದು ಮನವರಿಕೆ ನಮಗೆ ಮಾಡಿಕೊಟ್ಟಿದ್ದಾರೆ. ಜಿಜ್ಞಾಸೆ ಇರುವುದು ನಾಳೆ ಹಬ್ಬದ ತೊಂದರೆ, ಶುಕ್ರವಾರ ಮಾಡಬೇಕೇ ಶನಿವಾರ ಮಾಡಬೇಕೇ ಅಂತ. ಬಹುತೇಕ ಸದಸ್ಯರು ಶನಿವಾರ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಸದನ...

ಶ್ರೀ ಪಿ.ಜಿ.ಆರ್. ಸಿಂಧ್ಯ:- ಪತ್ರಿಕೆಯವರಿಲ್ಲದಿದ್ದರೂ ಪರವಾಗಿಲ್ಲ, ತಾವು ರಾಜ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ನನಗೆ ಅವಕಾಶ ಕೊಡಬೇಕು.

Mr.Speaker:- The Floor is yours. Even when we meet next time also you can continue. Yours is an incomplete speech.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಪತ್ರಿಕೆಯವರಿಲ್ಲದಿದ್ದರೂ ಪರವಾಗಿಲ್ಲ. ಇದು ಕನ್ನಡಿಗರ ಹಿತದೃಷ್ಟಿಯಿಂದಾಗಿ, ತಾವು ಒಪ್ಪಿಗೆ ಕೊಟ್ಟರೆ ನಾವು ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ. ಅದು ಕೆಣಬಿ ದಲ್ಲ. ಮುಂಬಯಿಯಲ್ಲಿ ನಾವು ಯಾವತ್ತೂ ನೋಡದೆ ಇರದ ಅವ್ಯಾಹತ ಹಿಂಸೆ ನಡೆಯುತ್ತಾ ಇದೆ. ನಾವೆಂದೂ ಕಾಣದ ಹಿಂಸಾಚಾರವನ್ನು ನಾವು ನೋಡುತ್ತಾ ಇದ್ದೇವೆ ಅದಿನ್ನೂ ತಹಬಂದಿಗೆ ಬರ್ತಾ ಇಲ್ಲ. ಇವತ್ತು ಸಂಜೆ ಪತ್ರಿಕೆಗಳ ವರದಿ ಪ್ರಕಾರ ಪರಿಸ್ಥಿತಿ ಇನ್ನೂ ಕಂಟ್ರೋಲಿಗೆ ಬಂದಿಲ್ಲ ಎಂದು ಕೇಳಿದ್ದೇವೆ. ಈಗ ಅಲ್ಲಿ ಕನ್ನಡಿಗರ ಪರಿಸ್ಥಿತಿ ಏನು? ನನಗೆ ತಿಳಿದಿರುವ ಹಾಗೆ ಅನೇಕ ಕನ್ನಡಿಗರು ಬರುತ್ತಾ ಇದ್ದಾರೆ ಈ ಕಡೆ. ಅವರ ಆಸ್ತಿಪಾಸ್ತಿ ಲೂಟಿಯಾಗಿದೆ ಎಂದು ಕೇಳಿದ್ದೇವೆ. ಎಷ್ಟು ಜನ ಸತ್ತಿದ್ದಾರೆ, ಏನು ಅವರ ಪರಿಸ್ಥಿತಿ, ತಾವೇನಾದರೂ ಅಲ್ಲಿ ಮುಖ್ಯಮಂತ್ರಿಗಳ ಜೊತೆ ಮಾತಾಡಿದ್ದೀರಾ? ಇದರ ಬಗ್ಗೆ ತಾವು ದಯವಿಟ್ಟು ವಿಚಾರ ತಿಳಿದುಕೊಂಡು ಒಂದು ಹೇಳಿಕೆ ಕೊಡಬೇಕು, ಇವತ್ತೇ ಹೇಳಬೇಕೆಂದು

ನಾನು ಕೇಳುವುದಿಲ್ಲ, ನಾಡಿದ್ದು ಹೇಳಿ. ಅಲ್ಲಿರುವ ಮುಖ್ಯಮಂತ್ರಿಗಳ ಜೊತೆ ಮಾತಾಡಿ ಅಲ್ಲಿನ ಕನ್ನಡಿಗರ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ತಾವು ಹೇಳಿಕೆ ಕೊಡಬೇಕೆಂದು ನಿರೀಕ್ಷೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸಂಜೆ ಪತ್ರಿಕೆಗಳಲ್ಲಿ ಬಾಂಬೆ ನಗರದಿಂದ ಕನ್ನಡಿಗರು ಭಯ ಭೀತಿಯಿಂದ ಹೊರಗಡೆ ಹೋಗುತ್ತಿದ್ದಾರೆ, ಅವರ ಆಸ್ತಿಪಾಸ್ತಿಗಳು ನಷ್ಟವಾಗಿದೆ ಎಂಬ ಸುದ್ದಿ ಬಂದಿದೆ. ಆ ಸುದ್ದಿ ನಿಜವಾಗಿದ್ದರೆ ಅವರಿಗೆ ಏನು ಪರಿಹಾರ ಮಾಡಬೇಕು, ತಕ್ಷಣ ಯಾವ್ಯಾವ ವ್ಯವಸ್ಥೆ ಮಾಡಬೇಕೆಂಬುದನ್ನು ನಮ್ಮ ಗಮನಕ್ಕೆ ತರಬೇಕೆಂದು ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಅಧ್ಯಕ್ಷರೇ, ಮುಂಬಯಿಯಲ್ಲಿ ನಡೆದಿರುವ ಘಟನೆ ಬಹಳ ದುರದೃಷ್ಟಕರ. ಆದರೆ ಕನ್ನಡಿಗರು ಮರಾಠಿಗಳ ಮಧ್ಯೆ ಅಲ್ಲ, ಆ ಭಾಷೆ ವಿಚಾರ ಏನೂ ಇಲ್ಲ. ವಿರೋಧ ಪಕ್ಷದ ಉಪನಾಯಕ ಮಾನ್ಯ ಸಿಂಧ್ಯಾ ಅವರು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಶಂಕೆ ವ್ಯಕ್ತಪಡಿಸಿದ್ದೀರಿ, ಆದರೆ ನನಗೆ ಬಂದ ವರ್ತಮಾನದ ಪ್ರಕಾರ ಕನ್ನಡಿಗರ ಆಸ್ತಿ ಪ್ರಾಣ ನಾಶವಾದದ್ದರ ವರದಿ ಇಷ್ಟರವರೆಗೆ ನಮಗೆ ಬಂದಿಲ್ಲ. ನಾನು ಈ ಬಗ್ಗೆ ಸನ್ಮಾನ್ಯ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಇವರ ಜೊತೆ ಮಾತಾಡಿದ್ದೇನೆ. We have been alert on this. ಇಲ್ಲಿಯವರೆಗೆ ಇದರ ಬಗ್ಗೆ ವರ್ತಮಾನವಿಲ್ಲ, ಆದರೂ ಪತ್ರಿಕೆಯಲ್ಲಿ ವಲಸೆ ಬಗ್ಗೆ ತಾವೂ ಹೇಳಿದ್ದೀರಿ, ವಲಸೆ ಬಂದ ವರ್ತಮಾನ ಇಷ್ಟರವರೆಗೂ ಇಲ್ಲ, ಅದೇನಾದರೂ ಇದ್ದರೆ ನಾನು ಶನಿವಾರ ಸಂಪೂರ್ಣವಾದ ವರದಿ ಕೊಡುತ್ತೇನೆ.

ಅಧ್ಯಕ್ಷರು:– ಈಗ ಸಭೆ ಮುಂದುವರಿದು ಶನಿವಾರ 16–1–1993ರಂದು ಬೆಳಿಗ್ಗೆ 11 ಗಂಟೆಗೆ ಮರು ಸಮಾವೇಶಗೊಳ್ಳುವುದು.

ಸದನವು 6 ಗಂಟೆ 30 ನಿಮಿಷಕ್ಕೆ ಮುಂದೂಡಲ್ಪಟ್ಟಿತು.

(ಸದನ 6–30ಕ್ಕೆ ಮುಕ್ತಾಯವಾಗಿ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳುವುದು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)